# ದ್ವಾದಶ ಜ್ಯೋತಿರ್ಲಿಂಗಗಳು

ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

## ೭. ಶ್ರೀವಿಶ್ವೇಶ್ವರ

ಶ್ರೀವಿಶ್ವೇಶ್ವರ ಜ್ಯೋತಿರ್ಲಿಂಗವು ಉತ್ತರ ಭಾರತದ ಪ್ರಸಿದ್ಧ ಕಾಶೀನಗರದಲ್ಲಿ ನೆಲೆಸಿದೆ. ಈ ನಗರಿಯು ಪ್ರಳಯ ಕಾಲದಲ್ಲಿಯೂ ನಾಶವಾಗುವುದಿಲ್ಲವೆಂದು ಪ್ರತೀತಿ. ಆಗ ಭಗವಾನ್ ಶಿವನು ತನ್ನ ನಿವಾಸಭೂಮಿಯಾದ ಈ ಪವಿತ್ರ ನಗರಿಯನ್ನು ತನ್ನ ತ್ರಿಶೂಲದ ಮೇಲೆ ಧರಿಸಿಕೊಂಡಿರುತ್ತಾನೆ ಹಾಗೂ ಸೃಷ್ಟಿಯ ಸಮಯ ಬಂದಾಗ ಪುನಃ ಅದರ ಜಾಗದಲ್ಲಿ ಸ್ಥಾಪಿಸುತ್ತಾನೆ. ಸೃಷ್ಟಿಯ ಆದಿಸ್ಥಳವೆಂದೂ ಈ ನಗರಿಯನ್ನು ಹೇಳಲಾಗುತ್ತದೆ. ಭಗವಾನ್ ವಿಷ್ಣುವು ಇದೇ ಸ್ಥಳದಲ್ಲಿ ಸೃಷ್ಟಿಕಾಮನೆಯಿಂದ ತಪಸ್ಸನ್ನು ಮಾಡಿ ಭಗವಾನ್ ಶಂಕರನನ್ನು ಒಲಿಸಿಕೊಂಡಿದ್ದನು. ಅಗಸ್ತ್ಯಮುನಿಗಳೂ ಕೂಡ ಇದೇ ಜಾಗದಲ್ಲಿ ತಮ್ಮ ತಪಸ್ಸಿನಿಂದ ಭಗವಾನ್ ಶಿವನನ್ನು ಮೆಚ್ಚಿಸಿದ್ದರು. ಈ ಪವಿತ್ರ ನಗರಿಯಲ್ಲಿ ಯಾರೇ ಆದರೂ ಪ್ರಾಣ ತ್ಯಜಿಸಿದರೆ ಅವನಿಗೆ ಮೋಕ್ಷಪ್ರಾಪ್ತವಾಗುವಷ್ಟು ಇದರ ಮಹಿಮೆ ಇದೆ. ಶ್ರೀಶಂಕರನು ಅವನ ಕಿವಿಯಲ್ಲಿ 'ತಾರಕ' ಮಂತ್ರವನ್ನು ಉಪದೇಶಿಸುತ್ತಾನೆ. ಈ ಮಂತ್ರದ ಪ್ರಭಾವದಿಂದ ಅವನು ಕೂಡ ಸುಲಭವಾಗಿಯೇ ಭವಸಾಗರದ ಬಾಧೆಗಳಿಂದ ದಾಟಿಹೋಗುತ್ತಾನೆ.

ಶ್ರೀವಿಶ್ವೇಶ್ವರನ ಈ ಲೀಲಾಕ್ಷೇತ್ರದಲ್ಲಿ ದಶಾಶ್ವಮೇಧ, ಲೋಲಾರ್ಕ, ಬಿಂದುಮಾಧವ, ಕೇಶವ ಮತ್ತು ಮಣಿಕರ್ಣಿಕಾ—ಇವು ಐದು ಪ್ರಧಾನ ತೀರ್ಥಗಳಾಗಿವೆ. ಇದನ್ನು 'ಅವಿಮುಕ್ತ ಕ್ಷೇತ್ರ' ಎಂದೂ ಹೇಳಲಾಗುತ್ತದೆ. ಈ ಪರಮಪವಿತ್ರ ನಗರಿಯ ಉತ್ತರದಲ್ಲಿ ಓಂಕಾರಖಂಡ, ದಕ್ಷಿಣದಲ್ಲಿ ಕೇದಾರಖಂಡ ಮತ್ತು ಮಧ್ಯದಲ್ಲಿ ವಿಶ್ವೇಶ್ವರಖಂಡವಿದೆ. ಪ್ರಸಿದ್ಧ ವಿಶ್ವೇಶ್ವರ ಜ್ಯೋತಿರ್ಲಿಂಗವು ಇದೇ ಖಂಡದಲ್ಲಿ ನೆಲೆಸಿದೆ. ಪುರಾಣಗಳಲ್ಲಿ ಈ ಜ್ಯೋತಿರ್ಲಿಂಗದ ಸಂಬಂಧವಾದ ಕಥೆಯು ಹೀಗಿದೆ:

ಭಗವಾನ್ ಶಂಕರನು ಪಾರ್ವತಿಯ ಪಾಣಿಗ್ರಹಣ ಮಾಡಿಕೊಂಡು ಕೈಲಾಸ ಪರ್ವತದಲ್ಲೇ ಇರುತ್ತಿದ್ದನು. ಆದರೆ ಅಲ್ಲಿ ತಂದೆಯ ಮನೆಯಲ್ಲೇ ವೈವಾಹಿಕ ಜೀವನ ನಡೆಸುವುದು ಪಾರ್ವತಿಗೆ ಒಳ್ಳೆಯದೆನಿಸಲಿಲ್ಲ. ಒಂದು ದಿನ ಅವಳು ಭಗವಾನ್ ಶಿವನ ಬಳಿ—"ಸ್ವಾಮಿ! ನೀವು ನನ್ನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ. ಇಲ್ಲಿ ಇರುವುದು ನನಗೆ ಸರಿಯೆನಿಸುತ್ತಿಲ್ಲ. ಎಲ್ಲ ಹೆಣ್ಣುಮಕ್ಕಳೂ ಮದುವೆಯಾದ ಬಳಿಕ ತಮ್ಮ ಗಂಡನ ಮನೆಗೆ ಹೋಗುತ್ತಾರೆ, ನಾನು ಮಾತ್ರ ತಂದೆಯ ಮನೆಯಲ್ಲೇ ಇರಬೇಕಾಗಿದೆ" ಎಂದು ಹೇಳಿದಳು. ಭಗವಾನ್ ಶಿವನು ಅವಳ ಈ ಮಾತನ್ನು ಒಪ್ಪಿಕೊಂಡನು. ಅವನು ಪಾರ್ವತಿ ಯೊಂದಿಗೆ ತನ್ನ ಪವಿತ್ರನಗರೀ ಕಾಶಿಗೆ ಬಂದನು. ಇಲ್ಲಿ ಬಂದು ವಿಶ್ವೇಶ್ವರ ಜ್ಯೋತಿರ್ಲಿಂಗದ ರೂಪದಲ್ಲಿ ನೆಲೆಸಿದನು.

## ೮. ಶ್ರೀತ್ರ್ಯಂಬಕೇಶ್ವರ

ಶ್ರೀತ್ರ್ಯಂಬಕೇಶ್ವರ ಜ್ಯೋತಿರ್ಲಿಂಗವು ನಾಸಿಕದಿಂದ ೩೦ ಕಿ.ಮೀ. ಪಶ್ಚಿಮದಲ್ಲಿ ನೆಲೆಸಿದೆ. ಈ ಜ್ಯೋತಿರ್ಲಿಂಗದ ಸ್ಥಾಪನೆಯ ವಿಷಯದಲ್ಲಿ ಶಿವಪುರಾಣದಲ್ಲಿ ಈ ಕಥೆ ಹೇಳಲಾಗಿದೆ :

ಒಮ್ಮೆ ಮಹರ್ಷಿ ಗೌತಮರ ತಪೋವನದಲ್ಲಿ ವಾಸಿಸುವ ಬ್ರಾಹ್ಮಣರ ಪತ್ನಿಯರು ಯಾವುದೋ ಮಾತಿಗಾಗಿ ಗೌತಮರ ಪತ್ನಿ ಅಹಲ್ಯೆಯೊಂದಿಗೆ ಸಿಟ್ಟುಗೊಂಡಿದ್ದರು. ಅವರು ತಮ್ಮ ಪತಿಯರನ್ನು ಋಷಿ ಗೌತಮರಿಗೆ ಅಪಕಾರ ಮಾಡಲು ಪ್ರೇರೇಪಿಸಿದರು. ಆ ಬ್ರಾಹ್ಮಣರು ಈ ನಿಮಿತ್ತವಾಗಿ ಶ್ರೀಗಣಪತಿಯ ಆರಾಧನೆ ಮಾಡಿದರು. ಅವರ ಆರಾಧನೆಯಿಂದ ಪ್ರಕಟನಾದ ಗಣಪತಿಯು ಬೇಕಾದ ವರವನ್ನು ಕೇಳಲು ಹೇಳಿದನು. ಆ ದುಷ್ಟ ಬ್ರಾಹ್ಮಣರು ಕೇಳಿದರು—"ಸ್ವಾಮಿ! ನೀನು ನಮ್ಮ ಮೇಲೆ ಪ್ರಸನ್ನನಾಗಿರುವೆ, ಯಾವುದೇ ರೀತಿಯಿಂದ ಗೌತಮ ಋಷಿಯನ್ನು ಈ ಆಶ್ರಮದಿಂದ ಹೊರಹಾಕಬೇಕು." ಅವರ ಮಾತನ್ನು ಕೇಳಿ ಗಜಾನನನು—"ಇಂತಹ ವರವನ್ನು ಕೇಳಬಾರದು" ಎಂದು ಸಮಜಾಯಿಸಿದನು. ಆದರೆ ಅವರು ತಮ್ಮ ಆಗ್ರಹದಿಂದ ಕದಲಲಿಲ್ಲ. ಕೊನೆಗೆ ಗಣಪತಿಯು ನಿರುಪಾಯನಾಗಿ ಅವರ ಮಾತನ್ನು ಒಪ್ಪಿಕೊಂಡನು.

ಈ ಋಷಿಗಳ ಮನೋಕಾಮನೆಯನ್ನು ನಡೆಸಲು ಒಂದು ದುರ್ಬಲ ಹಸುವನ್ನು ಸೃಷ್ಟಿಸಿ ಗೌತಮರ ಹೊಲದಲ್ಲಿ ಮೇಯಲು ಬಿಡಲಾಯಿತು. ಹಸುವು ಹೊಲವನ್ನು ಮೇಯುತ್ತಿರುವುದನ್ನು ಕಂಡ ಗೌತಮರು ಮೆಲ್ಲಗೆ ಬಂದು ಹುಲ್ಲುಕಡ್ಡಿಯಿಂದ ಅದನ್ನು ಹೊರಗೆ ಅಟ್ಟಲು ತೊಡಗಿದರು. ಆ ಹುಲ್ಲುಕಡ್ಡಿಯು ಹಸುವಿಗೆ ತಗಲುತ್ತಿದ್ದಂತೆಯೇ ಆ ಹಸುವು ಅಲ್ಲೇ ಸತ್ತುಬಿತ್ತು. ಆಗ ಭಾರೀ ಹಾಹಾಕಾರವಾಯಿತು. ಎಲ್ಲ ಬ್ರಾಹ್ಮಣರು ಒಂದಾಗಿ ಗೋಹತ್ಯೆ ಮಾಡಿದೆ ಎಂದು ಗೌತಮರನ್ನು ನಿಂದಿಸಿದರು. ಗೌತಮ ಋಷಿಗಳು ಈ ಘಟನೆಯಿಂದ ಆಶ್ಚರ್ಯಚಕಿತರೂ ದುಃಖಿತರೂ ಆದರು. ಆಗ ಆ ಎಲ್ಲ ಬ್ರಾಹ್ಮಣರು, "ನೀನು ಈ ಆಶ್ರಮವನ್ನು ಬಿಟ್ಟು ಬೇರೆ

ಎಲ್ಲಾದರೂ ಹೊರಟುಹೋಗಬೇಕು. ಗೋಹತ್ಯೆ ಮಾಡಿದವನ ಜೊತೆಗೆ ನಾವಿದ್ದರೆ ನಮಗೂ ಪಾಪ ತಟ್ಟೀತು" ಎಂದು ಹೇಳಿದರು. ಉಪಾಯ ಕಾಣದೆ ಗೌತಮ ಋಷಿಗಳು ತಮ್ಮ ಪತ್ನಿ ಅಹಲ್ಯೆಯೊಂದಿಗೆ ಅಲ್ಲಿಂದ ಒಂದು ಗಾವುದದೂರ ಹೋಗಿ ವಾಸಿಸಿದರು. ಆದರೆ ಆ ಬ್ರಾಹ್ಮಣರು ಅಲ್ಲಿಯೂ ಅವರು ನಿಲ್ಲುವುದನ್ನು ವಿರೋಧಿಸಿದರು. ಅವರೆಂದರು: "ಗೋಹತ್ಯೆಯ ಕಾರಣ ನಿನಗೆ ಈಗ ವೇದಪಾರಾಯಣ, ಯಜ್ಞಾದಿ ಕಾರ್ಯಗಳನ್ನು ಮಾಡುವ ಅಧಿಕಾರವೂ ಇಲ್ಲ." ಗೌತಮ ಋಷಿಗಳು ಕಾತರಭಾವದಿಂದ ಬ್ರಾಹ್ಮಣರಲ್ಲಿ ಪ್ರಾರ್ಥಿಸಿ ಕೊಂಡರು, "ನೀವೆಲ್ಲ ಪ್ರಾಯಶ್ಚಿತ್ತ ಮತ್ತು ಉದ್ಧಾರದ ಉಪಾಯವನ್ನು ನನಗೆ ಹೇಳಿರಿ" ಎಂದು. ಆಗ ಅವರೆಲ್ಲರು— "ಗೌತಮರೆ! ನೀವು ನಿಮ್ಮ ಪಾಪವನ್ನು ಎಲ್ಲೆಡೆ ಎಲ್ಲರಿಗೆ ಹೇಳುತ್ತಾ ಮೂರುಬಾರಿ ಇಡೀ ಭೂಪ್ರದಕ್ಷಿಣೆ ಮಾಡಬೇಕು. ಮತ್ತೆ ಮರಳಿ ಬಂದು ಇಲ್ಲಿ ಒಂದು ತಿಂಗಳವರೆಗೆ ವ್ರತ ವನ್ನಾಚರಿಸಬೇಕು. ಇದಾದ ಬಳಿಕ ಬ್ರಹ್ಮಗಿರಿಗೆ ೧೦೧ ಪ್ರದಕ್ಷಿಣೆ ಮಾಡಿದ ನಂತರ ನಿಮ್ಮ ಶುದ್ಧಿಯಾದೀತು. ಇಲ್ಲವೆ ಇಲ್ಲಿಗೆ ಗಂಗೆಯನ್ನು ತಂದು ಅದರಲ್ಲಿ ಸ್ನಾನಮಾಡಿ, ಒಂದು ಕೋಟಿ ಪಾರ್ಥಿವ ಶಿವಲಿಂಗಗಳಿಂದ ಶಿವನ ಆರಾಧನೆ ಮಾಡಿ. ಇದಾದ ಬಳಿಕ ಪುನಃ ಗಂಗೆಯಲ್ಲಿ ಸ್ನಾನಮಾಡಿ ಈ ಬ್ರಹ್ಮ ಗಿರಿಗೆ ೧೧ ಬಾರಿ ಪ್ರದಕ್ಷಿಣೆ ಮಾಡಿ. ಮತ್ತೆ ನೂರು ಕೊಡಗಳ ಪವಿತ್ರ ಜಲದಿಂದ ಪಾರ್ಥಿವ ಶಿವಲಿಂಗಕ್ಕೆ ಅಭಿಷೇಕ ಮಾಡಿದರೆ ನಿಮ್ಮ ಶುದ್ಧಿಯಾದೀತು" ಎಂದು ಅಪ್ಪಣೆ ಕೊಡಿಸಿದರು.

ಬ್ರಾಹ್ಮಣರ ಮಾತಿನಂತೆ ಗೌತಮ ಋಷಿಗಳು ಅವೆಲ್ಲವನ್ನು ಮಾಡಿ ಮುಗಿಸಿ, ಪತ್ನಿಯೊಂದಿಗೆ ಭಗವಾನ್ ಶಿವನ ಆರಾಧನೆಯಲ್ಲಿ ತಲ್ಲೀನರಾದರು. ಇದರಿಂದ ಪ್ರಸನ್ನನಾದ ಶಂಕರನು ಪ್ರಕಟಗೊಂಡು ಗೌತಮರಿಗೆ ವರವನ್ನು ಕೇಳಲು ಹೇಳಿದನು. ಮಹರ್ಷಿ ಗೌತಮರು—"ಭೂತಭಾವನ ಭವನೆ! ನೀನು ನನ್ನನ್ನು ಗೋಹತ್ಯೆಪಾಪದಿಂದ ಮುಕ್ತಗೊಳಿಸು. ಇಷ್ಟನ್ನೇ ನಾನು ಬಯಸುವುದು" ಎಂದು ವಿನಯದಿಂದ ವಿನಂತಿಸಿಕೊಂಡರು. ಭಗವಾನ್ ಶಿವನು ಹೇಳಿದನು : "ಗೌತಮರೆ! ನೀವು ಸರ್ವಥಾ ನಿಷ್ಪಾಪರಾಗಿದ್ದೀರಿ. ಗೋಹತ್ಯೆಯನ್ನು ಕುತಂತ್ರದಿಂದ ನಿಮ್ಮ ಮೇಲೆ ಹೇರಲಾಗಿತ್ತು. ಕಪಟವನ್ನು ಮಾಡಿರುವ ಬ್ರಾಹ್ಮಣರನ್ನು ನಾನು ಶಿಕ್ಷಿಸಲು ಬಯಸುತ್ತೇನೆ." ಗೌತಮರೆಂದರು : "ಸ್ವಾಮಿ, ಅವರ ನಿಮಿತ್ತವಾಗಿಯೇ ನನಗೆ ನಿನ್ನ ದರ್ಶನ ದೊರಕಿತು. ಅವರೆಲ್ಲರು ನನಗೆ ಪರಮಹಿತವನ್ನು ಮಾಡಿದವರೆಂದು ತಿಳಿದು ಈಗ ಅವರ ಮೇಲೆ ಸಿಟ್ಟಾಗಬೇಡ." ಆಗ ಅನೇಕ ಋಷಿಗಳೂ, ಮುನಿಗಳೂ, ದೇವತೆಗಳೂ ಅಲ್ಲಿ ನೆರೆದು ಗೌತಮರ ಮಾತನ್ನು ಅನುಮೋದಿಸುತ್ತಾ ಭಗವಾನ್ ಶಿವನಲ್ಲಿ ನೀನು ಎಂದೆಂದಿಗೂ ಇಲ್ಲೇ ವಾಸಿಸಬೇಕು ಎಂದು ಪ್ರಾರ್ಥಿಸಿಕೊಂಡರು. ಶ್ರೀಶಿವನು ಅವರ ಮಾತನ್ನು ಮನ್ನಿಸಿ ಅಲ್ಲೇ ತ್ರ್ಯಂಬಕೇಶ್ವರ ಜ್ಯೋತಿರ್ಲಿಂಗವೆಂಬ ಹೆಸರಿನಿಂದ ನೆಲೆಸಿದನು. ಗೌತಮರ ಮೂಲಕ ತಂದಿರುವ ಗಂಗೆಯೂ ಕೂಡ ಅಲ್ಲೇ ಗೋದಾವರಿ ಹೆಸರಿನಿಂದ ಹರಿಯತೊಡಗಿದಳು. ಈ ಜ್ಯೋತಿರ್ಲಿಂಗವು ಎಲ್ಲ ಪುಣ್ಯ ಗಳನ್ನು ಕೊಡುವಂತಹದಾಗಿದೆ.

## ೯. ಶ್ರೀವೈದ್ಯನಾಥ

ಶ್ರೀವೈದ್ಯನಾಥ ಜ್ಯೋತಿರ್ಲಿಂಗವು ಬಿಹಾರದ ಸಂಥಾಲ ಎಂಬ ಪ್ರಾಂತ್ಯದಲ್ಲಿ ನೆಲೆಗೊಂಡಿದೆ. ಇದರ ಸ್ಥಾಪನೆಯ ವಿಷಯದಲ್ಲಿ ಈ ಕಥೆಯನ್ನು ಹೇಳಲಾಗುತ್ತದೆ : ಒಮ್ಮೆ ರಾಕ್ಷಸರಾಜ ರಾವಣನು ಹಿಮಾಲಯಕ್ಕೆ ಹೋಗಿ ಭಗವಾನ್ ಶಿವನ ದರ್ಶನ ಪಡೆಯಲು ಘೋರ ತಪಸ್ಸನ್ನಾಚರಿಸಿದನು. ಅವನು ಒಂದೊಂದಾಗಿ ತನ್ನ ತಲೆಯನ್ನು ಕಡಿದು ಶಿವಲಿಂಗಕ್ಕೆ ಅರ್ಪಿಸತೊಡಗಿದನು. ಈ ರೀತಿ ಅವನು ಒಂಭತ್ತು ತಲೆಗಳನ್ನು ಕಡಿದು ಅರ್ಪಿಸಿದನು. ಕೊನೆಗೆ ತನ್ನ ಹತ್ತನೇ ತಲೆಯನ್ನು ಕಡಿಯಲು ತೊಡಗಿದಾಗ ಭಗವಾನ್ ಶಿವನು ಪ್ರಸನ್ನನಾಗಿ ಅವನಿದಿರು ಪ್ರಕಟನಾದನು. ತಲೆಯನ್ನು ಕಡಿಯಲು ಮುಂದಾದ ರಾವಣನ ಕೈಯನ್ನು ಹಿಡಿದುಕೊಂಡು, ಹಾಗೆ ಮಾಡದಂತೆ ತಡೆದನು. ಅವನ ಒಂಭತ್ತು ತಲೆಗಳನ್ನು ಮೊದಲಿದ್ದಂತೆ ಜೋಡಿಸಿ, ವರವನ್ನು ಕೇಳಲು ಹೇಳಿದನು.

ರಾವಣನು ವರರೂಪದಲ್ಲಿ ನಿನ್ನ ಆತ್ಮಲಿಂಗವನ್ನು ಲಂಕೆಗೆ ಕೊಂಡುಹೋಗಲು ಕರುಣಿಸಬೇಕೆಂದು ಶ್ರೀಶಿವನಲ್ಲಿ ಬೇಡಿ ಕೊಂಡನು. ಶ್ರೀಶಿವನೆಂದನು : "ನೀನು ಈ ಲಿಂಗವನ್ನು ಕೊಂಡುಹೋಗಬಹುದು. ಆದರೆ ದಾರಿಯಲ್ಲಿ ಎಲ್ಲಾದರು ಇದನ್ನು ನೆಲದ ಮೇಲಿರಿಸಿದರೆ ಅದು ಅಲ್ಲೇ ಸ್ಥಿರವಾಗ ಬಹುದು. ಮತ್ತೆ ನೀನು ಕದಲಿಸಲಾರೆ." ರಾವಣನು ಈ ಮಾತನ್ನು ಒಪ್ಪಿಕೊಂಡು ಶಿವನು ಕರುಣಿಸಿದ ಶಿವಲಿಂಗವನ್ನು ಎತ್ತಿಕೊಂಡು ಲಂಕೆಯ ಕಡೆಗೆ ಹೊರಟನು. ಹೋಗು ತ್ತಿರುವಾಗ ದಾರಿಯಲ್ಲಿ ಅವನಿಗೆ ಲಘುಶಂಕೆಯ ಅವಸರ ವಾಯಿತು. ಅವನು ಆ ಶಿವಲಿಂಗವನ್ನು ಓರ್ವ ಬೇಡನ ಕೈಯ ಲ್ಲಿಟ್ಟು ಮೂತ್ರಶಂಕೆಗಾಗಿ ಹೊರಟುಹೋದನು. ಆ ಬೇಡನು ಶಿವಲಿಂಗದ ಭಾರವನ್ನು ತಡೆಯಲಾರದೆ ನೆಲದಮೇಲೆ ಇರಿಸಿದನು. ರಾವಣನು ಮರಳಿಬಂದು ಆ ಶಿವಲಿಂಗವನ್ನು ಎತ್ತಿಕೊಳ್ಳಲು ಎಷ್ಟೇ ಪ್ರಯತ್ನ ಮಾಡಿದರೂ ಅವನಿಂದಾಗ ಲಿಲ್ಲ. ಕೊನೆಗೆ ನಿರುಪಾಯನಾಗಿ ಆ ಪವಿತ್ರ ಶಿವಲಿಂಗದ ಮೇಲೆ ತನ್ನ ಹೆಬ್ಬೆಟ್ಟಿನ ಗುರುತನ್ನು ಮೂಡಿಸಿ, ಅದನ್ನು ಅಲ್ಲೇ ಬಿಟ್ಟು ಲಂಕೆಗೆ ಹೊರಟುಹೋದನು. ಅದಾದ ಬಳಿಕ ಬ್ರಹ್ಮಾ, ವಿಷ್ಣು ಮುಂತಾದ ದೇವತೆಗಳು ಅಲ್ಲಿಗೆ ಬಂದು ಆ ಶಿವಲಿಂಗವನ್ನು ಪೂಜಿಸಿದರು. ಇದೇ ಜ್ಯೋತಿರ್ಲಿಂಗವು ವೈದ್ಯ ನಾಥ ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ.

ಈ ವೈದ್ಯನಾಥ ಜ್ಯೋತಿರ್ಲಿಂಗವು ಹನ್ನೊಂದು ಅಂಗುಲ ಎತ್ತರವಿದ್ದು ಮೇಲ್ಗಡೆ ಅಂಗುಷ್ಠ ಆಕಾರದ ಗುಳಿ ಇದೆ.


ರಾವಣನ ಅಂಗುಷ್ಠದ ಗುರುತು ಇದೇ ಎಂದು ಹೇಳಲಾಗುತ್ತವೆ. ಇಲ್ಲಿ ದೂರ-ದೂರದಿಂದ ತೀರ್ಥಗಳನ್ನು ತಂದು ಅಭಿಷೇಕ ಮಾಡುವ ಸಂಪ್ರದಾಯವಿದೆ. ರೋಗನಾಶಕ್ಕಾಗಿಯೂ ಈ ಜ್ಯೋತಿರ್ಲಿಂಗದ ಮಹಿಮೆ ತುಂಬ ಪ್ರಸಿದ್ಧವಾಗಿದೆ.

## ೧೦. ಶ್ರೀನಾಗೇಶ್ವರ

ಭಗವಾನ್ ಶಿವನ ಪ್ರಸಿದ್ಧವಾದ ಶ್ರೀನಾಗೇಶ್ವರ ಜ್ಯೋತಿರ್ಲಿಂಗವು ಗುಜರಾತ ಪ್ರಾಂತದ ದ್ವಾರಕೆಯಿಂದ ಅಂದಾಜು ೧೨ ಮೈಲು ದೂರದಲ್ಲಿ ನೆಲೆಸಿದೆ. ಈ ಜ್ಯೋತಿರ್ಲಿಂಗದ ಸಂಬಂಧವಲ್ಲಿ ಪುರಾಣಗಳಲ್ಲಿ ಕಥೆ ಹೀಗಿದೆ : ಸುಪ್ರಿಯ ಎಂಬ ಓರ್ವ ದೊಡ್ಡ ಧರ್ಮಾತ್ಮ, ಸದಾಚಾರಿ ವೈಶ್ಯನಿದ್ದನು. ಅವನು ಭಗವಾನ್ ಶಿವನ ಅನನ್ಯ ಭಕ್ತನಾಗಿದ್ದನು. ಅವನು ನಿರಂತರ ಶಿವನ ಆರಾಧನೆ, ಪೂಜೆ ಮತ್ತು ಧ್ಯಾನದಲ್ಲಿ ತಲ್ಲೀನನಾಗಿರುತ್ತಿದ್ದನು. ತನ್ನ ಎಲ್ಲ ಕಾರ್ಯಗಳನ್ನು ಅವನು ಶಿವನಿಗೆ ಅರ್ಪಿಸುತ್ತಾ ಮಾಡುತ್ತಿದ್ದನು. ಮನೋವಾಕ್ಕಾಯವಾಗಿ ಅವನು ಪೂರ್ಣವಾಗಿ ಶಿವಾರ್ಚನೆಯಲ್ಲಿ ನಿರತನಾಗಿರುತ್ತಿದ್ದನು. ಇವನ ಈ ಶಿವಭಕ್ತಿಯಿಂದ ದಾರುಕ ಎಂಬ ಓರ್ವ ರಾಕ್ಷಸನು ತುಂಬಾ ಕ್ರುದ್ಧನಾಗಿದ್ದನು. ಅವನು ಭಗವಾನ್ ಶಿವನ ಈ ಪೂಜೆಯನ್ನು ಯಾವುದೇ ರೀತಿಯಿಂದ ಮೆಚ್ಚುತ್ತಿರಲಿಲ್ಲ. ಅವನು ಸುಪ್ರಿಯನ ಪೂಜೆ, ಅರ್ಚನೆಯಲ್ಲಿ ವಿಘ್ನವನ್ನೊಡ್ಡಲು ಯಾವಾಗಲೂ ಪ್ರಯತ್ನಿಸುತ್ತಿದ್ದನು. ಒಮ್ಮೆ ಸುಪ್ರಿಯನು ದೋಣಿಯಿಂದ ಎಲ್ಲಿಗೋ ಹೋಗುತ್ತಿದ್ದನು. ಆ ದುಷ್ಟ ರಾಕ್ಷಸ ದಾರುಕನು ಅನುಕೂಲವಾದ ಈ ಸಂದರ್ಭವನ್ನು ನೋಡಿ, ಆ ದೋಣಿಯ ಮೇಲೆ ಆಕ್ರಮಣ ಮಾಡಿದನು. ದೋಣಿಯಲ್ಲಿದ್ದ ಎಲ್ಲ ಯಾತ್ರಿಕರನ್ನು ಸೆರೆಹಿಡಿದು ತಂದು ತನ್ನ ರಾಜಧಾನಿಯ ಕಾರಾಗೃಹದಲ್ಲಿರಿಸಿದನು.

ಸುಪ್ರಿಯನು ಸೆರೆಮನೆಯಲ್ಲಿಯೂ ತನ್ನ ನಿತ್ಯನಿಯಮದಂತೆ ಭಗವಾನ್ ಶಿವನ ಪೂಜೆ ಮಾಡತೊಡಗಿದನು. ಸೆರೆಯಾದ ಉಳಿದ ಯಾತ್ರಿಕರಿಗೂ ಕೂಡ ಅವನು ಶಿವಭಕ್ತಿಯ ಪ್ರೇರಣೆ ಕೊಡುತ್ತಿದ್ದನು. ದಾರುಕನು ತನ್ನ ಸೇವಕರಿಂದ ಸುಪ್ರಿಯನ ವಿಷಯವನ್ನು ತಿಳಿದುಕೊಂಡು ಅವನನ್ನು ನೋಡಲು ಬಂದನು. ಆಗ ಸುಪ್ರಿಯನು ಭಗವಾನ್ ಶಿವನ ಧ್ಯಾನದಲ್ಲಿ ಕಣ್ಣುಮುಚ್ಚಿ ಕುಳಿತಿದ್ದನು. ರಾಕ್ಷಸನು ಅವನ ಈ ಧ್ಯಾನಮುದ್ರೆಯನ್ನು ನೋಡಿ ಭಯಂಕರ ಸ್ವರದಲ್ಲಿ ಅವನನ್ನು ಗದರಿಸುತ್ತಾ—"ಎಲೈ ದುಷ್ಟ ವೈಶ್ಯನೆ! ನೀನು ಕಣ್ಣು ಮುಚ್ಚಿ ಈಗ ಇಲ್ಲಿ ಯಾವ ಉಪದ್ರವ ಹಾಗೂ ಷಡ್ಯಂತ್ರವನ್ನು ಯೋಚಿಸುತ್ತಿರುವೆ?" ಎಂದು ಕೇಳಿದನು. ಅವನು ಹೀಗೆ ಗದರಿಸುತ್ತಿದ್ದರೂ ಧರ್ಮಾತ್ಮ ಸುಪ್ರಿಯನ ಸಮಾಧಿಯು ಭಂಗವಾಗಲಿಲ್ಲ. ಆಗ ಆ ರಾಕ್ಷಸನು ಸಿಟ್ಟಿನಿಂದ ಉರಿದುಬಿದ್ದನು. ಅವನು ತನ್ನ ಅನುಚರ ರಾಕ್ಷಸರಿಗೆ ಸುಪ್ರಿಯ ವೈಶ್ಯ ಹಾಗೂ ಬೇರೆ ಎಲ್ಲರನ್ನು ಕೊಂದುಹಾಕಲು ಆಜ್ಞಾಪಿಸಿದನು. ಸುಪ್ರಿಯನು ಅವನ ಈ ಆದೇಶದಿಂದ ಸ್ವಲ್ಪವೂ ವಿಚಲಿತನಾಗಲಿಲ್ಲ ಹಾಗೂ ಭಯಭೀತನೂ ಆಗಲಿಲ್ಲ. ಅವನು ಏಕನಿಷ್ಠಭಾವ ಮತ್ತು ಏಕಾಗ್ರ ಮನಸ್ಸಿನಿಂದ ತನ್ನ ಹಾಗೂ ಉಳಿದ ಬಂಧಿತರ ಮುಕ್ತಿಗಾಗಿ ಭಗವಾನ್ ಶಿವನನ್ನು ಪ್ರಾರ್ಥಿಸಿದನು. ತನ್ನ ಆರಾಧ್ಯ ಭಗವಾನ್ ಶಿವನೆ ಈ ವಿಪತ್ತಿನಿಂದ ತನ್ನನ್ನು ಅವಶ್ಯವಾಗಿ ಬಿಡುಗಡೆ ಮಾಡುವನೆಂಬ ಪೂರ್ಣವಿಶ್ವಾಸ ಅವನಲ್ಲಿತ್ತು. ಅವನ ಪ್ರಾರ್ಥನೆ ಕೇಳಿದ ಭಗವಾನ್ ಶಿವನು ಕೂಡಲೇ ಆ ಕಾರಾಗೃಹದ ಒಂದು ಎತ್ತರವಾದ ಸ್ಥಾನದಲ್ಲಿ ಹೊಳೆಯುತ್ತಿರುವ ಸಿಂಹಾಸನದಲ್ಲಿ ಸ್ಥಿತನಾಗಿ ಜ್ಯೋತಿರ್ಲಿಂಗ ರೂಪದಲ್ಲಿ ಪ್ರಕಟನಾದನು. ಅವನು ಈ ಪ್ರಕಾರ ಸುಪ್ರಿಯನಿಗೆ ದರ್ಶನವಿತ್ತು, ಅವನಿಗೆ ತನ್ನ ಪಾಶುಪತ ಅಸ್ತ್ರವನ್ನು ಕರುಣಿಸಿದನು. ಆ ಅಸ್ತ್ರದಿಂದ ರಾಕ್ಷಸ ದಾರುಕ ಹಾಗೂ ಅವನ ಅನುಚರರನ್ನು ವಧಿಸಿ ಸುಪ್ರಿಯನು ಶಿವಲೋಕಕ್ಕೆ ಹೊರಟುಹೋದನು. ಭಗವಾನ್ ಶಿವನ ಆದೇಶಕ್ಕನುಸಾರವಾಗಿ ಈ ಜ್ಯೋತಿರ್ಲಿಂಗದ ಹೆಸರು ನಾಗೇಶ್ವರ ಎಂದಾಯಿತು.

## ೧೧. ಶ್ರೀಸೇತುಬಂಧ ರಾಮೇಶ್ವರ



ಶ್ರೀಸೇತುಬಂಧ ರಾಮೇಶ್ವರ ಜ್ಯೋತಿರ್ಲಿಂಗದ ಸ್ಥಾಪನೆ ಮಾಡಿದವನು ಮರ್ಯಾದಾ ಪುರುಷೋತ್ತಮ ಭಗವಾನ್ ಶ್ರೀರಾಮಚಂದ್ರ. ಇದರ ವಿಷಯದಲ್ಲಿ ಹೀಗೊಂದು ಕಥೆ ಹೇಳಲಾಗುತ್ತದೆ: ಶ್ರೀರಾಮಚಂದ್ರನು ಲಂಕೆಯ ಮೇಲೆ ಆಕ್ರಮಣ ಮಾಡಲು ಹೋಗುತ್ತಿದ್ದಾಗ ಇದೇ ಜಾಗದಲ್ಲಿ ಅವನು ಸಮುದ್ರತೀರದ ಮರಳಿನಿಂದ ಶಿವಲಿಂಗವನ್ನು ಮಾಡಿ ಅದನ್ನು ಪೂಜಿಸಿದ್ದನು. ಈ ಜಾಗದಲ್ಲಿ ಉಳಿದು ಭಗವಾನ್ ಶ್ರೀರಾಮನು ನೀರು ಕುಡಿಯುತ್ತಿದ್ದ. ಅಷ್ಟರಲ್ಲಿ "ನನ್ನನ್ನು ಪೂಜಿಸದೆಯೆ ನೀರು ಕುಡಿಯುತ್ತಿರುವೆಯಲ್ಲ?" ಎಂಬ ಅಶರೀರವಾಣಿ ಕೇಳಿಸಿತು. ಈ ವಾಣಿಯನ್ನು ಕೇಳಿದ ಶ್ರೀರಾಮನು ಮರಳಿನಿಂದ ಶಿವಲಿಂಗವನ್ನು ಮಾಡಿ ಅದನ್ನು

ಪೂಜಿಸಿದನು ಹಾಗೂ ಭಗವಾನ್ ಶಿವನಲ್ಲಿ ರಾವಣ ನನ್ನು ಜಯಿಸುವ ವರವನ್ನು ಕೇಳಿಕೊಂಡನು. ಶ್ರೀಶಿವನು ಸಂತೋಷ ದಿಂದ ಶ್ರೀರಾಮನಿಗೆ ವರವನ್ನು ಕರುಣಿಸಿದನು. ಶಿವನು ಲೋಕ-ಕಲ್ಯಾಣಾರ್ಥವಾಗಿ ಜ್ಯೋತಿರ್ಲಿಂಗದ ರೂಪದಲ್ಲಿ ಅಲ್ಲೇ ನೆಲೆಸಲು ಎಲ್ಲರೂ ಮಾಡಿದ ಪ್ರಾರ್ಥನೆಯನ್ನು ಸ್ವೀಕರಿಸಿ ದನು. ಅಂದಿನಿಂದ ಈ ಜ್ಯೋತಿರ್ಲಿಂಗವು ಇಲ್ಲಿ ವಿರಾಜಮಾನ ವಾಗಿದೆ.

ಈ ಜ್ಯೋತಿರ್ಲಿಂಗದ ವಿಷಯದಲ್ಲಿ ಇನ್ನೊಂದು ಕಥೆ ಯನ್ನು ಈ ಪ್ರಕಾರ ಹೇಳಲಾಗುತ್ತದೆ: ಶ್ರೀರಾಮನು ರಾವಣ ನನ್ನು ವಧಿಸಿ ಅಯೋಧ್ಯೆಗೆ ಹಿಂದಿರುಗುವಾಗ ಸಮುದ್ರತೀರದ ಗಂಧಮಾದನ ಪರ್ವತದ ಮೇಲೆ ಬೀಡು ಬಿಟ್ಟಿದ್ದನು. ಅಲ್ಲಿಗೆ ಅನೇಕ ಋಷಿಮುನಿಗಳು ಅವನ ಬಳಿಗೆ ದರ್ಶನಕ್ಕಾಗಿ ಬಂದರು. ಅವರೆಲ್ಲರನ್ನು ಶ್ರೀರಾಮನು ಸತ್ಕರಿಸಿ—"ಪುಲಸ್ತ್ಯ ವಂಶಜ ರಾವಣನನ್ನು ವಧಿಸಿದ ಕಾರಣ ನನಗೆ ಬ್ರಹ್ಮಹತ್ಯೆಯ ಪಾಪ ತಗುಲಿದೆ. ಇದರ ನಿವೃತ್ತಿಯ ಯಾವುದಾದರು ಉಪಾಯ ವನ್ನು ನೀವೆಲ್ಲ ತಿಳಿಸಬೇಕು" ಎಂದು ಕೇಳಿಕೊಂಡನು. ಇದನ್ನು ಕೇಳಿ ಅಲ್ಲಿ ನೆರೆದಿದ್ದ ಎಲ್ಲ ಋಷಿಗಳೂ ಮುನಿಗಳೂ ಏಕ ಕಂಠದಿಂದ ಹೇಳಿದರು : "ಶ್ರೀರಾಮ ! ನೀನು ಇಲ್ಲಿ ಶಿವ ಲಿಂಗವನ್ನು ಸ್ಥಾಪಿಸು. ಇದರಿಂದ ನೀನು ಬ್ರಹ್ಮಹತ್ಯೆಯ ಪಾಪದಿಂದ ಬಿಡುಗಡೆ ಹೊಂದುವೆ."

ಶ್ರೀರಾಮನು ಅವರ ಮಾತನ್ನು ಮನ್ನಿಸಿ, ಹನುಮಂತನಿಗೆ ಕೈಲಾಸ ಪರ್ವತಕ್ಕೆ ಹೋಗಿ ಅಲ್ಲಿಂದ ಶಿವಲಿಂಗವನ್ನು ತರಲು ಆಜ್ಞಾಪಿಸಿದನು. ಹನುಮಂತನು ಕೂಡಲೇ ಕೈಲಾಸ ಪರ್ವತವನ್ನು ತಲುಪಿದನು. ಆದರೆ ಆಗ ಅಲ್ಲಿ ಅವನಿಗೆ ಶಿವನ ದರ್ಶನವಾಗಲಿಲ್ಲ. ಆದ್ದರಿಂದ ಅವನು ಶ್ರೀಶಿವನ ದರ್ಶನ ಪಡೆಯಲು ಅಲ್ಲೇ ಕುಳಿತು ತಪಸ್ಸಿಗೆ ತೊಡಗಿದನು. ಕೆಲ ಕಾಲ ಕಳೆಯಲು ಶ್ರೀಶಿವನ ದರ್ಶನ ಪಡೆದು ಹನುಮಂತನು ಶಿವಲಿಂಗವನ್ನು ಎತ್ತಿಕೊಂಡು ಮರಳಿದನು. ಆದರೆ ಅಷ್ಟರಲ್ಲಿ ಶುಭಮುಹೂರ್ತವು ಕಳೆದುಹೋಗುವ ಕಾರಣದಿಂದ ಇಲ್ಲಿ ಸೀತೆಯ ಮೂಲಕ ಶಿವಲಿಂಗ ಸ್ಥಾಪನೆ ಮಾಡಿಸಿಯಾಗಿತ್ತು.

ಹನುಮಂತನು ಇದೆಲ್ಲವನ್ನು ನೋಡಿ ತುಂಬ ದುಃಖಿತ ನಾದನು. ಅವನು ತನ್ನ ನೋವನ್ನು ಶ್ರೀರಾಮನಿಗೆ ಹೇಳಿಕೊಂಡನು. ಶ್ರೀರಾಮನು ಮೊದಲೇ ಶಿವಲಿಂಗದ ಸ್ಥಾಪನೆಯ ಕಾರಣವನ್ನು ಹನುಮಂತನಿಗೆ ತಿಳಿಸಿ, "ಇನ್ನು ನೀನು ಬಯಸುವೆಯಾದರೆ ಈ ಲಿಂಗವನ್ನು ಇಲ್ಲಿಂದ ಕಿತ್ತು, ನೀನು ತಂದ ಲಿಂಗವನ್ನು ಅಲ್ಲಿ ಸ್ಥಾಪಿಸು," ಎಂದನು. ಹನುಮಂತನು ಸಂತೋಷದಿಂದ ಆ ಲಿಂಗವನ್ನು ಕೀಳಲು ತೊಡಗಿದನು. ಆದರೆ ಎಷ್ಟೇ ಪ್ರಯತ್ನ ಮಾಡಿದರೂ ಅದು ಅಲುಗಾಡಲಿಲ್ಲ. ಕೊನೆಗೆ ಅವನು ಆ ಶಿವಲಿಂಗವನ್ನು ತನ್ನ ಬಾಲದಿಂದ ಸುತ್ತುಹಾಕಿ ಕೀಳಲು ಪ್ರಯತ್ನಿಸಿದರೂ ಅದು ಹೇಗಿದೆಯೋ ಹಾಗೆಯೇ ಗಟ್ಟಿಯಾಗಿ ಇದ್ದುಬಿಟ್ಟಿತು. ಬದಲಿಗೆ ಹನುಮಂತನೇ ಒಂದು ಯೋಜನ ದೂರಕ್ಕೆ ಎಸೆಯಲ್ಪಟ್ಟನು. ಮೂರ್ಛಿತನಾಗಿ ಬಿದ್ದ ಅವನ ಶರೀರದಿಂದ ರಕ್ತ ಹರಿಯತೊಡಗಿತು. ಇದನ್ನು ನೋಡಿ ಎಲ್ಲ ಜನರು ವ್ಯಾಕುಲರಾದರು. ಸೀತಾ ಮಾತೆಯು ಮಗ ನಿಗಿಂತಲೂ ಹೆಚ್ಚು ಪ್ರಿಯನಾದ ಹನುಮಂತನ ಶರೀರದ ಮೇಲೆ ಕೈಯಾಡಿಸುತ್ತಾ ದುಃಖಿಸತೊಡಗಿದಳು. ಪ್ರಜ್ಞೆಬಂದು ಎದ್ದಾಗ ಹನುಮಂತನು ಶ್ರೀರಾಮನನ್ನು ಪರಬ್ರಹ್ಮನ ರೂಪದಲ್ಲಿ ಇದಿರಿಗೆ ನೋಡಿದನು. ಶ್ರೀರಾಮನು ಅವನಿಗೆ ಶ್ರೀಶಂಕರನ ಮಹಿಮೆಯನ್ನು ಹೇಳಿ ಎಚ್ಚರಿಸಿದನು. ಹನುಮಂತನಿಂದ ತಂದಿರುವ ಶಿವಲಿಂಗವನ್ನು ಅಲ್ಲೇ ಬಳಿಯಲ್ಲಿ ಸ್ಥಾಪಿಸ ಲಾಯಿತು. ಸ್ಕಂಧ ಪುರಾಣದಲ್ಲಿ ಇದರ ಮಹಿಮೆಯನ್ನು ವಿಸ್ತಾರವಾಗಿ ವರ್ಣಿಸಲಾಗಿದೆ.

## ೧೨.ಶ್ರೀಘುಶ್ಮೇಶ್ವರ

ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಶ್ರೀಘುಶ್ಮೇಶ್ವರವು ಕೊನೆಯ ಜ್ಯೋತಿರ್ಲಿಂಗವಾಗಿದೆ. ಇದನ್ನು ಘುಶ್ಮೇಶ್ವರ, ಘುಸೃಣೇಶ್ವರ ಅಥವಾ ಧೃಷ್ಣೇಶ್ವರ ಎಂದೂ ಹೇಳುತ್ತಾರೆ. ಇದು ಮಹಾರಾಷ್ಟ್ರದ ದೌಲತಾಬಾದಿನಿಂದ ೧೨ಮೈಲಿ ದೂರ ವೇರುಳ ಎಂಬ ಊರಿನ ಹತ್ತಿರ ನೆಲೆಸಿದೆ. ಈ ಜ್ಯೋತಿರ್ಲಿಂಗದ ಬಗ್ಗೆ ಪುರಾಣಗಳಲ್ಲಿ ಈ ಕಥೆ ಕೊಡಲಾಗಿದೆ : ದಕ್ಷಿಣದಲ್ಲಿ ದೇವಗಿರಿ ಪರ್ವತದ ಸಮೀಪದಲ್ಲಿ ಸುಧರ್ಮ ಎಂಬ ಓರ್ವ ಅತ್ಯಂತ ತೇಜಸ್ವೀ ತಪೋನಿಷ್ಠ ಬ್ರಾಹ್ಮಣನು ಇದ್ದನು. ಅವನ ಪತ್ನಿಯ ಹೆಸರು ಸುದೇಹಾ ಎಂದು. ಇಬ್ಬರಲ್ಲಿಯೂ ಪರಸ್ಪರ ಪ್ರೇಮವಿತ್ತು. ಯಾವುದೇ ರೀತಿಯ ಕಷ್ಟಗಳು ಅವರಿಗಿರಲಿಲ್ಲ. ಆದರೆ ಅವರಿಗೆ ಸಂತಾನಭಾಗ್ಯವಿರಲಿಲ್ಲ. ಸುದೇಹಾಳಿಗೆ ಸಂತಾನೋತ್ಪತ್ತಿ ಆಗುವ ಸಂಭವವಿಲ್ಲ ಎಂದು ಜ್ಯೋತಿಷ್ಯ ಗಣನೆಯಿಂದ ಗೊತ್ತಾಯಿತು. ಸುದೇಹಾಳು ಸಂತಾನವನ್ನು ತುಂಬ ಬಯಸುತ್ತಿದ್ದಳು. ಅವಳು ಒತ್ತಾಯ ಮಾಡಿ ತನ್ನ ತಂಗಿಯನ್ನೇ ಸುಧರ್ಮನೊಂದಿಗೆ ಎರಡನೇ ಮದುವೆ ಮಾಡಿಸಿ ದಳು.

ಸುಧರ್ಮನಿಗೆ ಮೊದಲಿಗೆ ಈ ಮಾತು ಒಪ್ಪಿಗೆಯಾಗ ದಿದ್ದರೂ, ಪತ್ನಿಯ ಒತ್ತಾಯಕ್ಕೆ ಮಣಿದು ಅವಳ ತಂಗಿ ಘುಶ್ಮಾಳೊಂದಿಗೆ ವಿವಾಹಿತನಾದನು. ಘುಶ್ಮಾಳು ಅತ್ಯಂತ ವಿನೀತ ಹಾಗೂ ಸದಾಚಾರಿಣೀ ಸ್ತ್ರೀಯಾಗಿದ್ದಳು. ಅವಳು ಭಗವಾನ್ ಶಿವನ ಅನನ್ಯ ಭಕ್ತೆಯಾಗಿದ್ದಳು. ದಿನನಿತ್ಯ ನೂರೊಂದು ಪಾರ್ಥಿವ ಶಿವಲಿಂಗಗಳನ್ನು ಮಾಡಿ ಭಕ್ತಿಯಿಂದ ಶಿವನನ್ನು ಪೂಜಿಸುತ್ತಿದ್ದಳು. ಭಗವಾನ್ ಶಿವನ ಕೃಪೆಯಿಂದ ಕೆಲವೆ ಕಾಲದಲ್ಲಿ ಅವಳಿಗೆ ಒಂದು ಅತ್ಯಂತ ಸುಂದರ ಪುತ್ರರತ್ನ ಜನಿಸಿತು. ಮಗುವು ಹುಟ್ಟಿದಂದಿನಿಂದ ಸುದೇಹಾ ಮತ್ತು ಘುಶ್ಮಾ ಇವರಿಬ್ಬರ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಇಬ್ಬರ ದಿನಗಳು ಸುಖವಾಗಿ ಕಳೆಯುತ್ತಿದ್ದುವು. ಆದರೆ ಕೆಲವೇ

ದಿನಗಳಲ್ಲಿ ಸುದೇಹಾಳ ಮನದಲ್ಲಿ ಕೆಟ್ಟ ವಿಚಾರ ಹುಟ್ಟಿಕೊಂಡಿತು. "ನನ್ನನ್ನು ಈ ಮನೆಯಲ್ಲಿ ಕೇಳುವವರೇ ಇಲ್ಲ. ಎಲ್ಲವೂ ಘುಶ್ಮಾಳೇ ಆಗಿದ್ದಾಳೆ. ಗಂಡನ ಮೇಲೆಯೂ ಅವಳೇ ಅಧಿಕಾರ ನಡೆಸುತ್ತಿದ್ದಾಳೆ. ಸಂತಾನವೂ ಅವಳಿಗೇ ಇದೆ" ಎಂದು ಯೋಚಿಸತೊಡಗಿದಳು. ಈ ಕೆಟ್ಟ ವಿಚಾರವು ದಿನೇ ದಿನೇ ಅವಳಲ್ಲಿ ಹೆಚ್ಚುತ್ತಾ ಹೋಯಿತು.

ಇತ್ತ ಘುಶ್ಮಾಳ ಮಗನು ಬೆಳೆಯುತ್ತಾ ತರುಣನಾದನು. ಅವನ ವಿವಾಹವೂ ನಡೆಯಿತು. ಇಷ್ಟರಲ್ಲೇ ಸುದೇಹಾಳ ಮನಸ್ಸಿನ ಕುವಿಚಾರವು ಬೆಳೆದು ಹೆಮ್ಮರವಾಯಿತು. ಕೊನೆಗೆ ಅವಳು ಒಂದು ದಿನ ಘುಶ್ಮಾಳ ತರುಣಪುತ್ರನನ್ನು ಮಲಗಿದ್ದಲ್ಲೇ ಕೊಂದು ಶವವನ್ನು ಒಂದು ಕೆರೆಗೆ ಎಸೆದುಬಿಟ್ಟಳು. ಘುಶ್ಮಾಳು ಪ್ರತಿದಿನವು ಇದೇ ಕೆರೆಯಲ್ಲಿ ಶಿವಲಿಂಗಗಳನ್ನು ವಿಸರ್ಜಿಸುತ್ತಿದ್ದಳು. ಬೆಳಗಾಗುತ್ತಲೇ ಎಲ್ಲರಿಗೆ ಈ ವಾರ್ತೆ ತಿಳಿದು ಮನೆಯಲ್ಲಿ ಕೋಲಾಹಲವೇ ಉಂಟಾಯಿತು. ಸುಧರ್ಮ ಮತ್ತು ಅವನ ಸೊಸೆ ತಲೆ ಚಚ್ಚಿಕೊಂಡು ಅಳುತ್ತಿದ್ದರು. ಆದರೆ ಘುಶ್ಮಾಳು ನಿತ್ಯದಂತೆ ಭಗವಾನ್ ಶಿವನ ಆರಾಧನೆಯಲ್ಲಿ ತಲ್ಲೀನಳಾಗಿದ್ದಳು. ಅವಳಿಗೆ ಇದೆಲ್ಲ ತಿಳಿಯಲೇ ಇಲ್ಲ. ಅವಳು ಪೂಜೆ ಮುಗಿಸಿ ಆ ಪಾರ್ಥಿವ ಶಿವಲಿಂಗಗಳನ್ನು ಕೆರೆಗೆ ವಿಸರ್ಜಿಸಲು ಹೊರಟಳು. ಶಿವಲಿಂಗಗಳನ್ನು ವಿಸರ್ಜಿಸಿ, ಶಿವನಾಮವನ್ನು ಕೊಂಡಾಡುತ್ತಾ ಹಿಂತಿರುಗುತ್ತಿದ್ದಾಗ ಕೆರೆಯಿಂದ ಅವಳ ಮುದ್ದು ಮಗನು ಎದ್ದು ಬರುವುದನ್ನು ನೋಡಿದಳು. ಅವನು ಎಂದಿನಂತೆ ಬಂದು ತಾಯಿಯ ಚರಣಗಳಲ್ಲಿ ವಂದಿಸಿದನು. ಆಗಲೇ ಭಗವಾನ್ ಶಿವನೂ ಕೂಡ ಅಲ್ಲಿ ಪ್ರಕಟನಾಗಿ ಘುಶ್ಮಾಳಿಗೆ ವರವನ್ನು ಕೇಳಲು ಹೇಳಿದನು. ಅವನು ಸುದೇಹಾಳ ನೀಚ ಕಾರ್ಯದಿಂದ ಸಿಟ್ಟುಗೊಂಡಿದ್ದನು. ತನ್ನ ತ್ರಿಶೂಲದಿಂದ ಅವಳ ಕತ್ತನ್ನು ಕತ್ತರಿಸಲು ಸಿದ್ಧನಾದಂತೆ ಕಂಡುಬರುತ್ತಿದ್ದನು. ಘುಶ್ಮಾಳು ಕೈಜೋಡಿಸಿ ಭಗವಾನ್ ಶಿವನನ್ನು ಅನೇಕ ವಿಧದಿಂದ ಸ್ತುತಿಸಿ ಕೊನೆಗೆ —"ಸ್ವಾಮಿ! ನೀನು ನನ್ನ ಮೇಲೆ ಪ್ರಸನ್ನನಾಗಿರುವಿ. ನನ್ನ ಆ ಬಡಪಾಯಿ ಅಕ್ಕನನ್ನು ಕ್ಷಮಿಸಿಬಿಡು. ಖಂಡಿತವಾಗಿ ಅವಳು ಅತ್ಯಂತ ನಿಂದನೀಯ, ನೀಚ ಕೆಲಸವನ್ನು ಮಾಡಿರುವಳು. ಆದರೆ ನಿನ್ನ ದಯೆಯಿಂದ ನನಗೆ ನನ್ನ ಪುತ್ರನು ಮರಳಿ ದೊರಕಿದನಲ್ಲ. ಈಗ ಅವಳನ್ನು ನೀನು ಕ್ಷಮಿಸಿಬಿಡು. ಒಡೆಯಾ! ನನ್ನ ಇನ್ನೊಂದು ಪ್ರಾರ್ಥನೆ ಇದೆ—ಜಗತ್ತಿನ ಕಲ್ಯಾಣಕ್ಕಾಗಿ ನೀನು ಇಲ್ಲಿಯೇ ಸದಾಕಾಲ ನೆಲೆಸಬೇಕು." ಭಗವಾನ್ ಶಿವನು ಅವಳ ಇವೆರಡೂ ಮಾತನ್ನು ನಡೆಸಿಕೊಟ್ಟನು ಹಾಗೂ ಜ್ಯೋತಿರ್ಲಿಂಗದ ರೂಪದಲ್ಲಿ ಅಲ್ಲೇ ಇರತೊಡಗಿದನು. ಶಿವಭಕ್ತೆ ಘುಶ್ಮಾಳ ಆರಾಧ್ಯನಾದ್ದರಿಂದ ಅವನು "ಘುಶ್ಮೇಶ್ವರ ಮಹಾದೇವ"ನೆಂದು ವಿಖ್ಯಾತನಾದನು.

## ಕೆಟ್ಟವರ ಬಗ್ಗೆಯೂ ಕನಿಕರ

ಒಮ್ಮೆ ಒಬ್ಬ ಯಾತ್ರಿಕ ರಮಣ ಮಹರ್ಷಿಗಳ ಆಶ್ರಮಕ್ಕೆ ಬಂದ. ಆಶ್ರಮದಲ್ಲಿ ಮಧ್ಯಾಹ್ನ ಭೋಜನಾದಿಗಳನಂತರ ಶ್ರೀರಮಣ ಮಹರ್ಷಿಗಳನ್ನು ಕಾಣಲು ಆಶ್ರಮದಲ್ಲೆಲ್ಲ ಸುತ್ತಿದ. ಮಹರ್ಷಿಗಳು ಎಲ್ಲೂ ಕಾಣಲಿಲ್ಲ. ಆದರೆ ಎಲ್ಲಿಂದಲೋ ಮಧುರವಾದ ಧ್ವನಿಯಲ್ಲಿ "ಏ ತುಂಟ" ಎಂದು ತಮಿಳಿನಲ್ಲಿ ಗದರಿಸುತ್ತಿದ್ದುದು ಕೇಳಿತು. ಯಾರಿರಬಹುದೆಂದು ಕಾಲುಮಾರ್ಗದ ಪೊದೆಯನ್ನು ಸರಿಸಿ ನೋಡಲು ಅಲ್ಲಿ ರಮಣಮಹರ್ಷಿಗಳು ಒಂದು ಬಂಡೆಯ ಮೇಲೆ ಆಶ್ರಮದ ಸಾಕುಪ್ರಾಣಿಗಳಿಂದ ಆವೃತರಾಗಿ ಕುಳಿತಿದ್ದರು. ಅವರ ತೊಡೆಯ ಮೇಲೆ ಒಂದು ಅಳಿಲು ಕುಳಿತಿತ್ತು. ಮಹರ್ಷಿಗಳು ಅದಕ್ಕೆ ಸ್ವಲ್ಪ ಕಾಳುಗಳನ್ನು ತಿನ್ನಿಸುತ್ತಿದ್ದರು. ಆದರೆ ಆ ಆಸೆಬುರುಕ ಅಳಿಲು ಅವರ ಬೆರಳನ್ನೇ ಕಡಿಯಲು ಶುರು ಮಾಡಿತ್ತು. ಮಹರ್ಷಿಗಳು ಆ ಅಳಿಲಿಗೆ, 'ನಿನಗೆ ನಾನಿನ್ನು ಕಾಳು ಕೊಡುವುದಿಲ್ಲ' ಎಂದು ಗದರಿಸುತ್ತಿದ್ದರು. 'ನಿನಗೆ ಕಾಳು ಬೇಕಿದ್ದರೆ ನೀನೇ ಕಷ್ಟಪಟ್ಟು ಪಡೆದುಕೊಳ್ಳಬೇಕು' ಎಂದೆಲ್ಲ ಹೇಳುತ್ತಿದ್ದರು. ಆದರೆ ಆ ಪಾಪದ ಅಳಿಲು ಮಹರ್ಷಿಗಳನ್ನು ತನಗಿನ್ನೂ ಕಾಳು ಬೇಕೆಂದು ಗೋಗರೆಯುತ್ತಿತ್ತು. ಎಷ್ಟೇ ಗೋಗರೆದರೂ ಏನೂ ಪ್ರಯೋಜನವಾಗಲಿಲ್ಲ. ಕೆಲವು ದಿನ ಹೀಗೆ ಕಳೆದವು. ಮಹರ್ಷಿಗಳು ಆ ಅಳಿಲಿಗೆ ಕಾಳನ್ನು ಏನು ಮಾಡಿದರೂ ಕೊಡಲಿಲ್ಲ. ಅಳಿಲಿಗೆ ಬಹಳ ದುಃಖವಾಯಿತು. ಅದು ಅಳಲು ಪ್ರಾರಂಭಿಸಿತು. ಮೊದಲೇ ಕರುಣಾಳುವಾದ ಮಹರ್ಷಿಗಳ ಮನ ಕರಗಿತು. ಅದರ ಬಗ್ಗೆ ಸ್ವಲ್ಪ ಮೃದುವಾಯಿತು ಅವರ ಮನಸ್ಸು. ಅಳಿಲಿಗೆ ಸ್ವಲ್ಪ ಕಾಳುಗಳನ್ನು ಕೊಟ್ಟು, ಅದನ್ನು ಕ್ಷಮಿಸಿರುವುದನ್ನು ತೋರಿಸಿದರು. ಈ ಘಟನೆಯ ನೀತಿಯೇನು? ನಾವು ಸಹ ಎಲ್ಲ ಜೀವಿಗಳಲ್ಲಿ ಕ್ಷಮೆ ತೋರಬೇಕು. ರಾಮಾಯಣದಲ್ಲಿ ಒಮ್ಮೆ ಸೀತಾಮಾತೆ ಹೀಗೆ ಹೇಳುತ್ತಾಳೆ: "ಈ ಪ್ರಪಂಚದಲ್ಲಿ ನಿಷ್ಕಳಂಕಿಗಳು ಯಾರಾದರೂ ಇದ್ದಾರೆಯೇ? ಆದರೆ ದಯಾಳುಗಳಾದ ಉತ್ತಮರು ಒಳ್ಳೆಯವರ ಬಗ್ಗೆ ಮಾತ್ರವೇ ಅಲ್ಲ, ಕೆಟ್ಟವರ ಬಗ್ಗೆಯೂ ಕನಿಕರವನ್ನು ಮೈಗೂಡಿಸಿಕೊಂಡಿರುತ್ತಾರೆ." **